**ಒಂದನೇ ಅಪರ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚಿತ್ರದುರ್ಗ**

**ಸಿಸಿ ನಂ:1649 /2022**

**ಫಿರ್ಯಾದುದಾರರು:-** ಮಹಿಳಾ ಪೋಲಿಸ್ ಠಾಣೆ, ಚಿತ್ರದುರ್ಗ

**ವಿರುದ್ಧ**

**ಆರೋಪಿತರು:**
1. ರವಿಕುಮಾರ
2. ಸುಜಾತ

**ದೋಷಾರೋಪಣೆ**

**ಶ್ರೀಮತಿ. ಚೈತ್ರ ಎ.ಎಮ್** ಬಿ.ಎಸ್.ಸಿ., ಎಲ್ಎಲ್.ಬಿ.. ಒಂದನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಚಿತ್ರದುರ್ಗ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಿಸುವುದೇನೆಂದರೆ:–

ಚಿತ್ರದುರ್ಗ ನಗರದ ಜೋಗಿಮಟ್ಟಿ ರಸ್ತೆಯ **4** ನೇ ಕ್ರಾಸ್ ನಲ್ಲಿ ಅಕ್ಕಪಕ್ಕದ ಮನೆ ವಾಸಿಗಳಾಗಿದ್ದು, ದಿನಾಂಕ **15.04.2022** ರಂದು ಬೆಳಿಗ್ಗೆ **7.00** ಗಂಟೆ ಸಮಯದಲ್ಲಿ ಚಾಸಾ–**1** ರವರು ಮನೆ ಹೊರಗಡೆ ಕಸ ಗುಡಿಸಲು ಬಂದಾಗ **1** ನೇ ಅರೋಪಿತನು ತನ್ನ ಬೈಕನ್ನು ತಂದು ಚಾಸಾ–**1** ರವರ ಮನೆ ಮುಂದೆ ನಿಲ್ಲಿಸಿದ್ದು ಚಾಸಾ–**1** ರವರು ಕಸ ಗುಡಿಸಲು ಬೈಕನ್ನು ತೆಗೆಯುವಂತೆ ಹೇಳಿದ್ದಕ್ಕೆ **1** ನೇ ಆರೋಪಿಯಾದ ನೀವು ಚಾಸಾ–**1** ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಆ ಮೂಲಕ ಭಾ ದಂ ಸಂ ಕಲಂ **504** ಸಹ ಕಲಂ **34** ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

ಎರಡನೆಯದಾಗಿ, ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ **2** ನೇ ಆರೋಪಿ ಚಾಸಾ–**1** ರವರ ಕೈಹಿಡಿದು ಎಳೆದು ಬೀಳಿಸಿ, **1** ನೇ ಆರೋಪಿ ಚಾಸಾ–**1** ರವರು ತೊಟ್ಟಿದ್ದ ನೈಟಿಯನ್ನು ಎಳೆದಾಡಿ ಕೂದಲನ್ನು ಹಿಡಿದು ಎಳೆದಾಡಿ, ಅವರ ಮಾನಕ್ಕೆ ಚ್ಯುತಿಯನ್ನುಂಟು ಮಾಡಿ ಭಾ ದಂ ಸಂ ಕಲಂ **354** ಸಹ ಕಲಂ **34** ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಮೂರನೆಯದಾಗಿ, ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ **1** ನೇ ಆರೋಪಿಯಾದ ನೀವು ಸಮಾನ ಉದ್ದೇಶದಿಂದ, ಚಾಸಾ–**1** ರವರ ಎದೆಗೆ, ತಲೆಗೆ, ಕೆನ್ನೆಗೆ, ಕಿವಿಗೆ ಹೊಡೆದಿದ್ದು, ಗಲಾಟೆ ಬಿಡಿಸಲು ಬಂದ ಚಾಸಾ–**4** ರವರಿಗೂ ಸಹ ಕೈಕಾಲುಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿ, ಆ ಮೂಲಕ ಭಾ ದಂ ಸಂ ಕಲಂ **323** ಸಹ ಕಲಂ **34** ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ.

ಕೊನೆಯದಾಗಿ, ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ–1 ರವರಿಗೆ ನೀವು ಮನೆ ಬಿಟ್ಟು ಹೋಗದಿದ್ದರೆ ನಿಮ್ಮನ್ನು ಸಾಯಿಸಿ ಬಿಡುತ್ತೇವೆಂತಾ, ಪ್ರಾಣ ಬೆದರಿಕೆ ಹಾಕಿ, ಈ ಮೂಲಕ ಭಾ ದಂ ಸಂ ಕಲಂ **506** ಸಹ ಕಲಂ **34** ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

ಈ ಮೇಲಿನ ಅಪರಾದಕ್ಕೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡತಕ್ಕದ್ದು.

**(**ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿತರಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿದ ನಂತರ ಅವರು ಅರ್ಥ ಮಾಡಿಕೊಂಡು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದ್ದೇನೆ ಎಂದು ದೃಡೀಕರಿಸಿರುತ್ತೇನೆ**)**

**ದಿನಾಂಕಃ27.07.2023**
**ಸ್ಥಳಃ ಚಿತ್ರದುರ್ಗ**

**ಒಂದನೇ ಅಪರ ಹಿರಿಯ ಸಿವಿಲ್**
**ಮತ್ತು ಜೆ.ಎಂ.ಎಫ್.ಸಿ, ಚಿತ್ರದುರ್ಗ**